IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ರಾಯಚೂರು ದೋ:ಆಬ್ ಪ್ರದೇಶದ ವೃತ್ತಿ ಕೌಶಲ್ಯಗಳು

ವೆಂಕಟೇಶ

ಸಹಾಯಕ ಪ್ರಾಧ್ಯಾಪಕರು

ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,

ನಿಜಲಿಂಗಪ್ಪ ಕಾಲೋನಿ, ಲಿಂಗಸೂಗೂರು ರಸ್ತೆ,

ರಾಯಚೂರು – 584101, ಕರ್ನಾಟಕ ರಾಜ್ಯ.

**ಸಾರಾಂಶ:**

ಈ ಪ್ರದೇಶದಲ್ಲಿ ಶ್ರಮಿಕ ವರ್ಗವಾಗಿ ರೈತಾಪಿವರ್ಗದ ನಂತರ ಪ್ರಧಾನವಾಗಿ ಗುರುತಿಸಿಕೊಂಡವರು ಕುಶಲಕರ್ಮಿಗಳು. ಕೃಷಿ ಉತ್ಪಾದನಾ ವ್ಯವಸ್ಥೆಯಲ್ಲಿ ಸಹಕಾರಿಗಳಾಗಿದ್ದರು. ಯಾವ ವೃತ್ತಿಗಳು ಕೌಶಲ್ಯವನ್ನು ಅವಲಂಬಿಸಿರುತ್ತವೆಯೋ ಅವು ಕುಶಲ ವೃತ್ತಿಗಳಾಗಿವೆ. ಕುಶಲಕರ್ಮಿ ಎಂಬ ಪದವನ್ನು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಕೆಲಸ ಅಥವಾ ವ್ಯಾಪಾರದಲ್ಲಿ ನಿಪುಣತೆಯನ್ನು ಪಡೆದಿರುವುದು ಎಂದು ತಿಳಿಯಬಹುದು. ಇಂತಹ ಕುಶಲಕರ್ಮಿಗಳನ್ನು ಆಧರಿಸಿ ಜೀವಿಸುವ ಜನರನ್ನು ಕುಶಲಕರ್ಮಿಗಳೆನ್ನುವರು. ಈ ಪ್ರದೇಶದಲ್ಲಿ ವಿವಿಧ ಬಗೆಯ ವೃತ್ತಿಕೌಶಲ್ಯಗಳನ್ನು ಕಾಣಬಹುದಾಗಿದೆ. ಅವುಗಳೆಂದರೆ, ನೇಕಾರರು, ಬಡಗಿಗಳು, ಕಮ್ಮಾರರು, ಕುಂಬಾರರು, ಅಕ್ಕಸಾಲಿಗರು, ಕಂಚುಗಾರರು, ತೆಲ್ಲಿಗರು, ಮಾಲೆಗಾರರು, ಮೇದಾರರು, ಮುಂತಾದ ವೃತ್ತಿ ಕೌಶಲ್ಯಗಳು ಇಲ್ಲಿ ಕಂಡು ಬರುತ್ತವೆ.

**ಮುಖ್ಯಾಂಶಗಳು:** ರಾಯಚೂರು ದೋ:ಆಬ್, ವೃತ್ತಿ ಕೌಶಲ್ಯಗಳು, ನೇಕಾರರು, ಬಡಗಿಗಳು, ಕಮ್ಮಾರರು, ಕುಂಬಾರರು, ಅಕ್ಕಸಾಲಿಗರು, ಕಂಚುಗಾರರು, ತೆಲ್ಲಿಗರು (ಗಾಣಿಗರು).

**ಪೀಠಿಕೆ:**

ದಖ್ಖನಿನಲ್ಲಿ 14ನೇ ಶತಮಾನದ ಪ್ರಾರಂಭದಿಂದಕೃಷಿಯೇತರ ಉತ್ಪಾದನಾ ಚಟುವಟಿಕೆಯಲ್ಲಿ ಅಪಾರವಾದ ಅಧಿಕ್ಯವನ್ನು ಗಮನಿಸಬಹುದಾಗಿದೆ. ಕೈಗಾರಿಕೆ ಮತ್ತು ಕೃಷಿಯೇತರ ಕಸಬುಗಳ ಮೇಲೆ ತೆರಿಗೆ ವಿಧಿಸುವುದರಲ್ಲಿ ಹೆಚ್ಚಳವನ್ನು ನೋಡಬಹುದು. ಕೈಗಾರಿಕೆ ಮತ್ತು ಕೃಷಿಯೇತರ ಕಸಬುಗಳ ವೃದ್ಧಿ ಕಾರಣವಾಗಿ ಹತ್ತಿ ನೇಯವುದು, ಬಟ್ಟೆ ನೇಯುವುದು, ಎಣ್ಣೆ ತೆಗೆಯುವುದು, ಸಕ್ಕರೆ, ಮತ್ತು ಬೆಲ್ಲ ತಯಾರಿಸುವುದು, ಇಟ್ಟಿಗೆ ತಯಾರಿಕೆ, ಉಪ್ಪು ಮಾಡುವುದು, ಅದಿರು ಕರಗಿಸಿ ಕಬ್ಬಿಣ ತಯಾರಿಸುವುದು ಮರಗೆಲಸ, ಗೊಂಬೆಗಳು ಮತ್ತು

ಪೌರ್ವಾತ್ಯ ಕಲಾವಸ್ತುಗಳ ತಯಾರಿಕೆ ಇವೆಲ್ಲ ಸ್ಥಳೀಯಮಾರುಕಟ್ಟೆಗಾಗಿ ಮಾತ್ರವಲ್ಲ. ಹೊರಕ್ಕೆ ರಫ್ತು ಮಾಡುವ ಪ್ರಮಾಣದಲ್ಲಿ ಬೆಳೆದವು. ಇದರಿಂದಾಗಿ ಈ ಉತ್ಪಾದನೆ ವಾಣಿಜ್ಯ ದೃಷ್ಟಿಯಿಂದ ಲಾಭದಾಯಕವಾಗಿತ್ತು. (ಷೇಕಅಲಿ: 1997: 2003).

**ರಾಯಚೂರು ದೊ:ಆಬ್ ಪ್ರದೇಶದ ವೃತ್ತಿ ಕೌಶಲ್ಯಗಳು:**

ಈ ಪ್ರದೇಶದ ಕೆಲವು ಪ್ರಮುಖ ವೃತ್ತಿ ಕೌಶಲ್ಯಗಳು ಹಾಗೂ ಕುಶಲಕರ್ಮಿಗಳ ಕುರಿತಾದ ಚಾರಿತ್ರಿಕ ನೋಟ ಈ ಕೆಳಗಿನಂತಿದೆ.

- ನೇಕಾರರು

ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಒಂದು ಪ್ರಮುಖ ಕುಶಲಕಲೆ ನೇಕಾರಿಕೆ. ನೇಕಾರರು ಹತ್ತಿ, ರೇಷ್ಮೆ ಮತ್ತು ಉಣ್ಣೆ ಬಟ್ಟೆಗಳನ್ನು ನೇಯುತ್ತಿದ್ದರು. ಹತ್ತಿ ಬೆಳೆಗೆ ಈ ಪ್ರದೇಶ ಮೊದಲಿನಿಂದಲೂ ಹೆಸರುವಾಸಿಯಾಗಿತ್ತು. ಈ ಕಾರಣಕ್ಕಾಗಿ ರಾಯಚೂರ ದೋ–ಅಬ್ ಪ್ರದೇಶವನ್ನು ಬ್ರಿಟಿಷರು 1853ರಲ್ಲಿ ನಡೆದ ಬಿರಾರ್ ಒಪ್ಪಂದದ ಪ್ರಕಾರ ನಿಜಾಮನಿಂದ ಪಡೆದುಕೊಳ್ಳಲಾಗಿತ್ತು. ಇದಕ್ಕೆ ಕಾರಣವೆಂದರೆ ಜಾಗತಿಕ ಮಾರುಕಟ್ಟೆಯಲ್ಲಿ ಈ ಪ್ರದೇಶದ ಹತ್ತಿ ಬಟ್ಟೆಗಳು ಬಹುಬೇಡಿಕೆಯನ್ನು ಪಡೆದು ಪ್ರಸಿದ್ಧಿಯಾಗಿದ್ದವು. ಈ ಪ್ರದೇಶದಲ್ಲಿ ನೇಕಾರಿಕೆ ವಿಜಯನಗರ ಕಾಲದಲ್ಲಿ ಹೆಚ್ಚು ಪ್ರಾಶಸ್ತ್ಯವನ್ನು ಪಡೆದುಕೊಂಡಿತೆನ್ನಬಹುದು. ಈ ಕಾಲದ ನೇಕಾರಿಕೆಯನ್ನು ಕುರಿತು ತಿಳಿಸುವ ಆಕರಗಳ ಕೊರತೆ ಎದ್ದು ಕಾಣುತ್ತದೆ. ಹಾಗೆಂದು ಈ ವೃತ್ತಿ ಇರಲಿಲ್ಲವೆಂದಲ್ಲ ಶಾಸನಗಳ ಉಲ್ಲೇಖ ಲಭೀಸುವುದಿಲ್ಲವಷ್ಟೆ. ವಿಜಯನಗರದ ಪೂರ್ವದಲ್ಲಿ ನೇಕಾರಿಕೆ ಈ ಪ್ರದೇಶ ಪ್ರಮುಖ ವೃತ್ತಿ ಕೌಶಲ್ಯವಾಗಿ ಅಧಿಕವಾಗಿ ನಡೆದಿರುವುದಾಗಿ ತಿಳಿದುಬರುತ್ತದೆ. "ನೇಕಾರರು ಉತ್ಪಾದನಾ ವಿನಿಮಯನದ ವರ್ತಕರಾಗಿ ಜೇಡಗೊತ್ತುಳಿ ಎಂಬ ವೃತ್ತಿ ಸಂಘವನ್ನು ಸ್ಥಾಪಿಸಿಕೊಂಡಿದ್ದರು. ಗೊಜ್ಜೇಶ್ವರ ಇವರ ಕುಲದೇವರು. ಇದು ಬಹುದೊಡ್ಡ ಕೈಗಾರಿಕೆಯಾಗಿರಬೇಕು. ಇವರನ್ನು ಕಲ್ಯಾಣ ಚಾಳುಕ್ಯರ ಶಾಸನಗಳು ಜೇಡರೊಕ್ಕಲು ಪಟ್ಟಸಾಲಿ ಎಂಬ ಹೆಸರುಗಳಿಂದ ಕರೆದಿವೆ. ಇವರು ದಾನ ನೀಡುವಲ್ಲಿ ಭಾಗಿಗಳಾಗಿದ್ದರು. ಎಂಬುದು ತಿಳಿದುಬರುತ್ತದೆ. (ಅಮರೇಶ ಆಲ್ಕೋಡ : 2014 : 107).

ನೇಕಾರಿಕೆಯ ಉದ್ದಿಮೆ ಇದ್ದಿರದಿದ್ದರೆ ಮನುಷ್ಯರಿಗೆ ಧರಿಸಲು ಬಟ್ಟೆಗಳು ಸಿಗುತ್ತಿರಲಿಲ್ಲ. ವಿಶೇಷ ತಾಂತ್ರಿಕತೆಯ ಮೂಲಕ ಮಾನ ಮುಚ್ಚುವ ಕಾಯಕ ಇವರದ್ದು. ಇವರ ಸೇವೆ ಅನನ್ಯವಾಗಿದೆ. ಇದು ಇಂದು ದೊಡ್ಡ ಪ್ರಮಾಣದ ಕೈಗಾರಿಕೆಗಳಾಗಿ ರೂಪುಗೊಂಡಿದೆ.

- ಬಡಗಿಗಳು

ಕೃಷಿ ಪ್ರಧಾನವಾಗಿದ್ದ ಈ ಪ್ರದೇಶದಲ್ಲಿ ಬಡಗಿಗಳ ಅವಶ್ಯಕತೆ ಇತ್ತು. ಕೃಷಿ ಮತ್ತು ಗೃಹ ಉಪಯೋಗಿ ವಸ್ತುಗಳನ್ನು ಗಿಡಮರಗಳ ಕಟ್ಟಿಗೆಯಿಂದ ತಯಾರಿಸಿಕೊಡುವ ವೃತ್ತಿಯನ್ನು ಬಡಗಿಗಳು ಎನ್ನುವರು. ಇವರು ಕೃಷಿ ಉಪಕರಣಗಳಾದ ನೇಗಿಲು, ಕುಂಟೆ, ಕೂರಿಗೆ, ನೊಗ, ಕುಡುಗೋಲು, ಚಿಕ್ಕ ಕುಂಟೆ, ಮುಂತಾದವುವನ್ನು ತಯಾರಿಸುವರು. ರಥಗಳ ನಿರ್ಮಾಣದಲ್ಲಿ ತೊಡಗಿದ್ದರು. ಈ ವೃತ್ತಿಯನ್ನು ಪಾಂಚಾರರಷ್ಟಲ್ಲದೆ ಇನ್ನು ಅನೇಕ ಸಮುದಾಯಗಳವರು ಅಳವಡಿಸಿಕೊಂಡಿವುದನ್ನು ಕಾಣಬಹುದಾಗಿದೆ. ಈ ಪ್ರದೇಶದಲ್ಲಿ ವಿಜಯನಗರ

ಕಾಲದಲ್ಲಿನ ಬಡಗಿಗಳನ್ನು ಕುರಿತು ಉಲ್ಲೆಖಿಸುವ ಶಾಸನಗಳು ಅಷ್ಟಾಗಿ ಕಂಡು ಬರುವುದಿಲ್ಲ. ಹಾಗೆಂದು ಈ ವೃತ್ತಿ ಇರಲಿಲ್ಲವೆಂದಲ್ಲ ಭಾವಿಸುವಂತಿಲ್ಲ. ಇವರು ಈ ಪ್ರದೇಶದ ಆರ್ಥಿಕತೆಯನ್ನು ವೃದ್ಧಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿವುದನ್ನು ಗಮನಿಸಬಹುದಾಗಿದೆ.

- ಕಮ್ಮಾರರು

ಕಬ್ಬಿಣ ಲೋಹದ ಕೆಲಸವನ್ನು ಮಾಡುತ್ತಿದ್ದವರನ್ನ ಕಮ್ಮಾರರೆಂದು ಕರೆಯುವರು. ಇವರು ಕೃಷಿ ಉಪಕರಣಗಳ ಜೊತೆಗೆ ಯುದ್ಧ, ನಿತ್ಯ ಜೀವನ, ಮುಂತಾದ ಸಂದರ್ಭಗಳಲ್ಲಿ ಅಗತ್ಯವಾಗಿದ್ದ ಕಬ್ಬಿಣದ ಸಲಕರಣೆಗಳನ್ನು ತಯಾರಿಸಿ ಕೊಡುವ ಕಸುಬಗರರು, ಇವರು. ಗ್ರಾಮದ ಆಯಗಾರ ವೃತ್ತಿಗಳಲ್ಲೊಂದಾಗಿದೆ. ಕೃಷಿಕ ಮತ್ತು ಕಮ್ಮಾರ ಇವರಿಬ್ಬರು ಪರಸ್ಪರ ಅವಲಂಬಿಗಳಾಗಿದ್ದರು. ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ತಯಾರಿಸಿ ಕೊಟ್ಟರೆ, ಕೃಷಿಕ ಅದಕ್ಕೆ ಪ್ರತಿಯಾಗಿ ಬೆಳೆದ ಧಾನ್ಯದ ಒಂದು ಭಾಗವನ್ನು ಕಮ್ಮಾರರಿಗೆ ನೀಡುತ್ತಿದ್ದನು. ಈ ಕಮ್ಮಾರಿಕೆಯನ್ನು ಕುರಿತು ಉಲ್ಲೇಖಿಸುವ ಶಾಸನಗಳು ವಿರಳ ಎನ್ನಬಹುದು.

ಆದರೂ ಮಟಮಾರಿ (5) 17ನೇ ಶತಮಾನದ ಶಾಸನಗಳಲ್ಲಿ ಕಮ್ಮಾರ ಎಂಬ ಉಲ್ಲೇಖವಿದೆ. (ದೇವರಕೊಂಡಾರೆಡ್ಡಿ: 2003: 6–7) 23 ಹಾಗೆಯೇ ನೂತನ ಶಿಲಾಯುಗದ ಕಾಲದ ಕುಲುಮೆಗಳು ಕವಿತಾಳ ಮತ್ತು ಕಲ್ಲೂರು ಮುಂತಾದ ಕಡೆಗಳಲ್ಲಿ, ಕಂಡುಬರುತ್ತವೆ. ಹೀಗೆ ಪುರಾತನ ಕಾಲದಿಂದಲೂ ಕೃಷಿ ಉತ್ಪಾದನೆಯಲ್ಲಿ ಭಾಗಿಯಾಗಿ ಆರ್ಥಿಕತೆಯನ್ನು ಹೆಚ್ಚುಸುವಲ್ಲಿ ಕಮ್ಮಾರರು ಮುಖ್ಯರಾಗಿದ್ದರು. ವಿಜಯನಗರ ಕಾಲದಲ್ಲಿ ಇವರ ಕುರಿತು ತಿಳಿಸುವ ಆಕರಗಳು ಲಭ್ಯವಿಲ್ಲ.

- ಕುಂಬಾರರು

ಈ ಪ್ರದೇಶದ ಚರಿತ್ರೆಯನ್ನು ತಿಳಿಸುವ ಅಂಶಗಳಲ್ಲಿ ಕುಂಬರಿಕೆಯು ಒಂದಾಗಿದೆ. ಇಲ್ಲಿಯವರೆಗೆ ನಡೆದಿರುವ ಅನೇಕ ಭೂ ಉತ್ಖನನಗಳಲ್ಲಿ ಮಡಕೆಯ ಪಾತ್ರವೇ ಪ್ರಧಾನವಾಗಿ ಕಂಡು ಬರುತ್ತದೆ. ಇದು ನಮ್ಮ ಸಂಸ್ಕೃತಿಯ ಭಾಗವಾಗಿದೆ. ಕುಂಬಾರಿಕೆ ಜನಸಾಮಾನ್ಯರ ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ಮಾನವನ ಬದುಕಿಗೆ ಒಂದು ಹೊಸ ನೆಲೆಯನ್ನು ಕಟ್ಟಿಸಿದ್ದು ಈ ಕುಂಬಾರಿಕೆ ವಿಜಯನಗರ ಪೂರ್ವದಲ್ಲಿ ಈ ವಋುತ್ತಿ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ನವಿಲೆ (8) 1135ರ ಶಾಸನದಲ್ಲಿ ಕುಂಬಾರ ರಾಚಿಮಯನ್ನ ಎಂಬಾತನಿಗೆ ಅರಸನಿಂದ ಭೂದಾನ ಲಬಿಸಿರುವ ಕುರಿತು ಸೂಚಿಸುತ್ತದೆ. ನೂತನ ಶೀಲಾಯುಗದ ಕಾಲದಲ್ಲಿ ಮಸ್ಕಿ, ಪಿಕ್ಲಿಹಾಳ ಹಾಗೂ ತೀರಾ ಇತ್ತೀಚಿನ ವರೆಗೂ ಅಂದರೆ 70 ರ ದಶಕದ ವರೆಗೂ ಮಣ್ಣಿನ ಮಡಿಕೆಯಗಳನ್ನು ಪ್ರತಿ ಕುಟುಂಬ ಬಳಸುತ್ತಿತ್ತು. ಅಷ್ಟೊಂದು ಈ ವೃತ್ತಿ ಜನಮಾನಸದಲ್ಲಿ ಹಾಸುಹೊಕ್ಕಾಗಿ ಬೆರೆತು ಹೋಗಿತ್ತು. ಈ ವೃತ್ತಿಯು ಸಹ ಗ್ರಾಮೀಣ ಆರ್ಥೀಕ ವ್ಯವಸ್ಥೇಯಲ್ಲಿ ಪ್ರಧಾನವಾಗಿತ್ತೆಂಬುದಾಗಿ ತಿಳಿದುಬರುತ್ತದೆ. ವರ್ತಮಾನದ ಸಂದರ್ಭದಲ್ಲಿ ಮಡಿಕೆಗೆ ವಿಶೇಷ ಬೇಡಿಕೆ ಬಂದಿದೆ. ಆಧುನಿಕತೆಯ ಭರಾಟೆಯಲ್ಲಿ ಸಿಲುಕಿದ ಜನ ಲೋಹದ ಪಾತ್ರೆ ಪಗಡೆಗಳಿಗೆ ಮಾರುಹೋಗಿದ್ದರು. ಆದರೆ ಅವುಗಳಿಂದ ದೇಹಕ್ಕೆ ನಷ್ಟವಾಯಿಯೇ ಹೊರತು ಲಾಭವಾಗಲಿಲ್ಲ. ಹಾಗಾಗಿ ಜನರು ಸರಳ ಜೀವನದತ್ತ ಸಾಗಲು ಈ ವೃತ್ತಿಯ ಪಾತ್ರ ಮುಖ್ಯವಾಗಿದೆ ಎನಿಸುತ್ತದೆ.

- ಅಕ್ಕಸಾಲಿಗರು

ಈ ಪ್ರದೇಶದ ಅಕ್ಕಸಾಲಿಗರ ಉಲ್ಲೇಖಗಳು ಅಲ್ಲಲ್ಲಿ ಕಂಡುಬರುತ್ತವೆ. ಇವರು ಬೆಳ್ಳಿ, ಬಂಗಾರ, ತಾಮ್ರದ ಆಭರಣ, ನಾಣ್ಯಗಳನ್ನು ಸಿದ್ಧಪಡಿಸುವಲ್ಲಿ ಸಿದ್ಧಹಸ್ತರು. ಈ ಪ್ರದೇಶದ ಹಟ್ಟಿಯಲ್ಲಿ ಚಿನ್ನದ ಗಣಿಗಾರಿಕೆ ನಡೆಯುತ್ತಿತ್ತು. ಅಲ್ಲದೆ ಹಣವನ್ನು ಸಿದ್ಧಪಡಿಸುತ್ತಿದ್ದ ಟಂಕಸಾಲೆಗಳು ಅಸ್ತಿತ್ವದಲ್ಲಿದ್ದವು. ಈ ಟಂಕಸಾಲೆಗಳಲ್ಲಿ ಕಮ್ಮಟಗಾರರೆಂದು ಅಕ್ಕಸಾಲಿಗರು ಅಧಿಕಾರಿಗಳಾಗಿ ಸೇವೆ ಸಲ್ಲಿಸಿರಬೇಕು. ವಿಜಯನಗರ ಪೂರ್ವದಲ್ಲಿ ಗಬ್ಬೂರು, ಮತ್ತು ಮುದಗಲಗಳಲ್ಲಿ ನಾಣ್ಯ ಮುದ್ರಣ ಕೇಂದ್ರಗಳಿದ್ದವು. ಅಲ್ಲದೆ ಕೃಷ್ಣದೇವರಾಯ 1521ರಲ್ಲಿ ರಾಯಚೂರು, ಕೋಟೆಯನ್ನು ಮುತ್ತಿಗೆ ಹಾಕಿದಾಗ ಸೈನಿಕರನ್ನು ಹುರಿದುಂಬಿಸಲೆಂದು ಬೆಳ್ಳಿ, ಬಂಗಾರ, ವಜ್ರ, ವೈಡೂರ್ಯ, ಮುಂತಾದ ಬೆಲೆ ಬಾಳುವ ವಸ್ತುಗಳ ಮಾರುಕಟ್ಟೆಗಳನ್ನು ಸಿದ್ಧಪಡಿಸಿದ್ದನೆಂದು ತಿಳಿದುಬರುತ್ತದೆ. ಅಲ್ಲದೆ ವಿಜಯನಗರ ರಾಜಧಾನಿಯಲ್ಲಿ ಮುತ್ತು, ರತ್ನ, ಹವಳಗಳನ್ನು ಮಾರುಕಟ್ಟೆಯಲ್ಲಿ ಶೇರಿನಿಂದ ಅಳತೆ ಮಾಡುತ್ತಿದ್ದರು ಎಂಬ ಪ್ರತೀತಿಯನ್ನು ಕಾಣುತ್ತೇವೆ. ಹಾಗೆಯೇ ರಾಯಚೂರು ಪಟ್ಟಣದಲ್ಲಿ ಸರಾಫ್ ಬಜಾರ ಎಂಬುದು ಬಂಗಾರದ ಬಜಾರ ಆಗಿ ಇಂದು ಪ್ರಸಿದ್ಧಿಯನ್ನು ಪಡೆದಿದೆ. ಈ ಹಿನ್ನೆಲೆಯಲ್ಲಿ ಬಂಗಾರದ ಬೆಳ್ಳಿಯ ಆಭರಣಗಳ ತಯಾರಿಕೆಯಲ್ಲಿ ಇವರ ಪಾತ್ರ ಮುಖ್ಯವಾಗಿತ್ತು. ಇವರು ವಿವಿಧ ಬಗೆಯ ಆಭರಣಗಳ ತಯಾರಿಕೆಯ ಕುಶುರಿ ಕೆಲಸದಲ್ಲಿ ಪ್ರಾವಿಣ್ಯತೆಯನ್ನು ಪಡೆದಿದ್ದರು. ಈ ಪ್ರದೇಶದ ಜನರು ಬಡವ ಶ್ರೀಮಂತ ಎನ್ನದೆ ಎಲ್ಲರಿಗೂ ಆಭರಣಗಳ ಮೇಲೆ ವ್ಯಾಮೋಹ ಇದ್ದಿತೆಂಬುದನ್ನು ಗಮನಿಸಬಹುದಾಗಿದೆ.

ವಿಜಯನಗರ ಪೂರ್ವದಲ್ಲಿ ಗಬ್ಬೂರು ಮತ್ತು ಮುದಗಲಗಳು ನಾಣ್ಯಗಳನ್ನು ಮುದ್ರಿಸುವ ಕೇಂದ್ರಗಳಾಗಿದ್ದವು. ಗಬ್ಬೂರಿನ ಮತ್ತು ಮುದಗಲ್ ಟಂಕಸಾಲೆಗಳಲ್ಲಿ ಬಂಗಾರ, ಬೆಳ್ಳಿ, ನಾಣ್ಯಗಳನ್ನು ಮುದ್ರಿಸಲಾಗುತ್ತಿತ್ತು. ಈ ಕಮ್ಮಟಗಳಿಂದ ಮುದ್ರಣಗೊಂಡ ವರಹ, ಟಂಕ, ದೊಡ್ಡ ಹೊನ್ನು, ಹಣ, ಹಾಗೆ, ಗದ್ಯಾಣ, ವಡ್ಡ, ಮೀಸಕ, ದಶಕ, ಪಂಚಕ ಮುಂತಾದ ನಾಣ್ಯಗಳಾಗಿವೆ. ಇವರು ತಮ್ಮ ಕುಶಲತೆಯಿಂದ ಆರ್ಥಿಕ ವ್ಯವಸ್ಥೆಗೆ ಸಹಕಾರಿಯಾಗಿದ್ದರು (ಅಮರೇಶ ಆಲ್ಕೋಡ: 2014: 109).

- ಕಂಚುಗಾರರು

ತಾಮ್ರ, ಹಿತ್ತಾಳೆ, ಕಂಚು ಎಂಬ ಮೂರು ಲೋಹಗಳಲ್ಲಿ ಕೆಲಸ ಮಾಡುವವರನ್ನು ಕಂಚುಗಾರರು ಎಂದು ಕರೆಯುತ್ತಾರೆ. ಈ ಮೂರು ಲೋಹಗಳನ್ನು ಬಳಸಿ ಹೊಸದೊಂದು ವಸ್ತುವನ್ನು ತಯಾರಿಸುತ್ತಿದ್ದರು. ವಿಗ್ರಹಗಳನ್ನು ತಯಾರಿಸುವಲ್ಲಿ ಪರಿಣಿತರಾಗಿದ್ದರು. ಇವರ ಬಗ್ಗೆ ಈ ಪ್ರದೇಶದಲ್ಲಿ ಹೆಚ್ಚಿನ ಮಾಹಿತಿಯಿಲ್ಲ. ಆದರೆ ದೇವದುರ್ಗ ತಾಲೂಕಿನ ಗೂಗಲ್ಲು(28) –1825ರ ಶಾಸನದಲ್ಲಿ ಕಂಚುಗಾರ ಅಮ್ಮ ಎಂಬ ಉಲ್ಲೇಖವಿದೆ. ಇದರ ಆಧಾರದ ಮೇಲೆ ಕಂಚುಗಾರರು ಈ ಪ್ರದೇಶದಲ್ಲಿದ್ದರೆಮದು ಊಹಿಸಬಹುದಾಗಿದೆ. ಇವರು ಸಹ ತಮ್ಮ ವೃತ್ತಿ ಕೌಶಲ್ಯದಿಂದ ಆರ್ಥಿಕ ವ್ಯವಸ್ಥೆಗೆ ಸಹಾಯಕರಾಗಿ ನಿರ್ವಹಿಸಬೇಕೆನಿಸುತ್ತದೆ (ಅಮರೇಶ ಆಲೋಡ: 2014: 209).

- ತೆಲ್ಲಿಗರು (ಗಾಣಿಗರು)

ಈ ಪ್ರದೇಶದಲ್ಲಿ ತೆಲ್ಲಿಗರ ಬಗ್ಗೆ ಸಾಕಷ್ಟು ಉಲ್ಲೇಖಗಳು ಶಾಸನಗಳಲ್ಲಿ ಕಂಡುಬರುತ್ತವೆ. ಆದರೆ ವಿಜಯಗರ ಕಾಲದ ಶಾಸನಗಳು ತೆಲ್ಲಿಗರ ಕುರಿತು ಯಾವುದೇ ಮಾಹಿತಿಯನ್ನು ನೀಡುವುದಿಲ್ಲ. ಆದರೂ ತೆಲ್ಲಿಗರು ಇಲ್ಲಿ ಇರಲಿಲ್ಲವೆಂದು ಭಾವಿಸುವಂತಿಲ್ಲ. ಏಕೆಂದರೆ ಈ ವೃತ್ತಿ ಕೌಶಲ್ಯ ಗಾಣಿಗ ಸಮುದಾಯಕ್ಕೆ ಮಾತ್ರ ಸೇರಿದ್ದು. ಈ ಗಾಣಿಗರೇ ಗಾಣಗಳ ಮೂಲಕ ಎಣ್ಣೆಯನ್ನು ಉತ್ಪಾದಿಸುತ್ತಿದ್ದರು. ಇದು ವಂಶಪಾರಂಪರ್ಯವಾದ ವೃತ್ತಿಯಾಗಿತ್ತು. ಹಾಗಾಗಿ ವಿಜಯನಗರ ಪೂರ್ವದಲ್ಲಿ ಕಂಡುಬರುವ ಉಲ್ಲೇಖಗಳು ಈ ಪ್ರದೇಶದಲ್ಲಿ ತೆಲ್ಲಿಗರ ಅಸ್ತಿತ್ವವನ್ನು ಸಾರಿ ಹೇಳುತ್ತವೆ. ವರ್ತಮಾನದವರೆಗು ಗಾಣಿಗರೇ ಗಾಣಗಳ ಮಾಲೀಕರಾಗಿರುವುದುಂಟು. ಈ ಪ್ರದೇಶದಲ್ಲೆ ಎಣ್ಣೆ ಬೀಜಗಳ್ನು ಚೆನ್ನಾಗಿ ಬೆಳೆಯುತ್ತಿದ್ದರು. ಅವುಗಳೆಂದರೆ, ಔಡಲ, ಎಳ್ಳು, ಸಾಸಿವೆ, ತೆಂಗು, ಶೇಂಗಾ, ಕುಸುಬೆ, ಸೂರ್ಯಕಾಂತಿ, ಅಗಸೆ, ಹೊಂಗೆ ಮುಂತಾದ ಬೀಜಗಳಿಂದ ಎಣ್ಣೆಯನ್ನು ತಯಾರಿಸಲಾಗುತ್ತಿತ್ತು. ಈ ಪ್ರದೇಶದ ದಾನ ಶಾಸನಗಳಲ್ಲಿ ದೇವಾಲಯ ದಾನಗಳ ಸಂದರ್ಭದಲ್ಲಿ ನಂದಾದೀವಿಗೆಗೆ ಎಣ್ಣೆಯನ್ನು ದಾನ ಮಾಡುವ ಉಲ್ಲೇಖ ಸಾಮಾನ್ಯವಾಗಿ ಬರುತ್ತದೆ. ಇಂತಹ ಎಣ್ಣೆಯನ್ನು ಸೋಂಟಿಗೆ ಲೆಕ್ಕದಲ್ಲಿ ಗಾಣದ ಲೆಕ್ಕದಲ್ಲಿ ನಿಶ್ಚಿತಪಡಿಸಿ ದಾನ ಮಾಡುತ್ತಿದ್ದರು. ಈ ಬಗ್ಗೆ ಈ ಪ್ರದೇಶದ ದೇವಾಲಯಗಳಿಗೆ ಅವರಿತವಾಗಿ ಪೂರೈಸುತ್ತಿದ್ದ ಜನರೇ ತೆಲ್ಲಿಗರು. ಎಣ್ಣೆಯ ಉತ್ಪಾದನೆ ಅಂದು ಪ್ರಮುಖ ಉದ್ದಿಮೆಯಾಗಿತ್ತು. ಎಣ್ಣೆಯನ್ನು ಉತ್ಪಾದಿಸುವವರನ್ನು ತೆಲ್ಲಿಗರು, ಗಾಣಿಗ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಎತ್ತುಗಾಣ, ಕೈಗಾಣ, ಮೆಟ್ಟುಗಾಣಗಳ ಮೂಲಕ ಎಣ್ಣೆಯನ್ನು ತಯಾರಿಸುತ್ತಿದ್ದರು. ಗಾಣಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಗಾಣದೆರೆ, ಗಾಣಾಯ ಎಂದು ಕರೆಯಲಾಗುತ್ತಿತ್ತೆಂದು ಅನ್ವರಿ (24)–114 ರ ಶಾಸನದಲ್ಲಿ ಉಲ್ಲೇಖಗೊಂಡಿದೆ. ಅಲ್ಲದೆ ತೆಲ್ಲಿಗಗೊತ್ತಳಿ ಎಂಬ ಸಂಘವನ್ನು ಕಟ್ಟಿಕೊಂಡಿದ್ದರು. ದೇವಾಲಯಗಳಿಗೆ ದಾನ ನೀಡುವಷ್ಟು ಆರ್ಥಿಕವಾಗಿ ಬಲಿಷ್ಠರಾಗಿದ್ದರೆಂದು ಚಂದನಕೇರಿ 939)–11ನ ಶತಮಾನದ ಶಾಸನ, ಜಲದುರ್ಗ(13)–1089 ಹಾಗು ಬಳಗಾನೂರು (40)–1182ರ ಶಾಸನಗಳು ಆಧಾರವಾಗಿ ನಿಲ್ಲುತ್ತವೆ. ಇವರು ಕೃಷಿ ಆಧಾರಿತ ಉದ್ದಿಮೆಯನ್ನು ಹೊಂದಿದ್ದ ಗಾಣಿಗರು ಬಹುಬೇಗನೆ ಮೇಲಸ್ತರದಲ್ಲಿ ಗುರುತಿಸಿಕೊಳ್ಳಲು ಪ್ರಯತ್ನಿಸಿದರೆಂದು ತಿಳಿದು ಬರುತ್ತದೆ. (ಅಮರೇಶ ಆಲ್ಕೋಡ: 2014: 109–110) ಇವರಲ್ಲದೆ ಮಾಲೆಗಾರರು, ಮೇದಾರರು, ಮುಂತಾದವರು ಕುಶಲಕರ್ಮಿಗಳಾಗಿದ್ದರು.

ಉಪಸಂಹಾರ:

ಕುಶಲಕರ್ಮಿಗಳು ಈ ಪ್ರದೇಶದಲ್ಲಿ ಕೈಗಾರಿಕೆಗೆ ಚಾಲನೆಯನ್ನು ನೀಡಿದರು. ಇವರು ಪ್ರಕೃತಿದತ್ತವಾಗಿ ಲಭ್ಯವಾಗುವ ಕಚ್ಚಾವಸ್ತುಗಳನ್ನೇ ಹೆಚ್ಚಾಗಿ ಬಳಸಿಕೊಂಡು ತಮ್ಮ ಉದ್ದಿಮೆಗಳನ್ನು ನಡೆಸುತ್ತಿದ್ದರು. ಅದೇ ರೀತಿ ತಮ್ಮ ಹಿತರಕ್ಷಣೆಗಾಗಿ ವೃತ್ತಿ ಸಂಘಗಳನ್ನು ರಚಿಸಿಕೊಂಡಿದ್ದರು. ಈ ವೃತ್ತಿಗಳು ಕೃಷಿ ಆಧಾರಿತವಾಗಿ ರೂಪುಗೊಂಡು ಈ ಪ್ರದೇಶದ ಆರ್ಥಿಕತೆಗೆ ಸಹಕಾರಿಯಾಗಿದ್ದವು. ಅಲ್ಲದೆ ಇವು ನಗರೀಕರಣದ ಸೃಷ್ಟಿಗೂ ಕಾರಣವಾದವೆನ್ನಬಹುದು.

**ಪರಾಮರ್ಶನ ಆಕರಗಳು:**

ಶರ್ಮ ಆರ್.ಎಸ್., 2020, ಪ್ರಾಚೀನ ಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವಿಜಯ ಪೂಣಚ್ಚ ತಂಬಡ, 2009, ಕೆಳವರ್ಗದ ಪ್ರತಿಭಟನೆ ಸಬಾಲ್ಟರ್ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಮರ್ಶೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀನಿವಾಸ್ ರಾವ್ ಬಿ.ವಿ., 1996, ರಾಯಚೂರು ಇತಿಹಾಸ, ಡಿ.ಎಂ ಸೂಗವೀರಶರ್ಮ ಪ್ರಕಾಶನ, ರಾಯಚೂರು

ಮೋಹನಕೃಷ್ಣ ರೈ., 2004, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದೇವರಕೊಂಡಾರೆಡ್ಡಿ (ಸಂ), 2003, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–7 ರಾಯಚೂರು ಜಿಲ್ಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.